# ಪ್ರೊಕ್ರೂಸ್ಟೆಸ್ ಮಂಚ

ಗ್ರೀಕರ ಒಂದು ದಂತಕತೆಯ ಪ್ರಕಾರ
ಪ್ರೊಕ್ರೂಸ್ಟೆಸ್ ಎಂಬ ಅಟ್ಟಿಕಾದ ದರೋಡೆಕೋರ

ಯಾರು ಸಿಕ್ಕಿದರೂ ತನ್ನ ವಶಕ್ಕೆ
ಹೊತ್ತುಹಾಕುತ್ತಿದ್ದ ಕಬ್ಬಿಣದೊಂದು ಮಂಚಕ್ಕೆ

ಮಂಚಕ್ಕಿಂತ ಯಾರೇ ಇದ್ದರೂ ಉದ್ದ
ಅವರ ಉದ್ದವನ್ನು ಕತ್ತರಿಸಿಬಿಡುತ್ತಿದ್ದ

ಮಂಚದಷ್ಟೂ ಉದ್ದವಿಲ್ಲದವರನ್ನು
ಉದ್ದಕ್ಕೆ ಎಳೆದೆಳೆದು ಹಿಗ್ಗಿಸುತ್ತಿದ್ದ

ಅವನ ಆ ಕ್ರಿಯೆಯ ಪ್ರಕ್ರಿಯೆಯಲ್ಲಿ ಒಬ್ಬರೂ
ಬದುಕಿ ಉಳಿಯದೆ ಸತ್ತುಹೋಗಿಬಿಡುತ್ತಿದ್ದರು

ಥೆಸುಯೆಸ್ ಅವನನ್ನು ಕೊಂದನೇನೋ ಸರಿ
ಆದರೆ ಜನನಾಯಕರಿಗೆಲ್ಲ ಅವನೇ ಮಾದರಿ

ಎಲ್ಲರನ್ನೂ ಒಂದೇ ವಿಚಾರಕ್ಕೆ ಒಗ್ಗಿಸುವ
ಬಡಿದು ಕಡಿದು ಒಂದೇ ಪ್ರಮಾಣಕ್ಕೆ ಬಗ್ಗಿಸುವ

ಪ್ರೊಕ್ರೂಸ್ಟೆಸ್ ಮಂಚ, ಎಂಥ ಸತ್ವರಿಮಾಣ
ಮನುಷ್ಯನಾಗುವುದಕ್ಕೆ ಪರಿಪೂರ್ಣ

ಇದ್ದರೆಷ್ಟು ಚೆನ್ನ ಎಲ್ಲರೂ ಒಂದೇ ರೀತಿ
ಅದಕ್ಕೆ ಬೇಕೇಬೇಕು ಹಲವರ ಆಹುತಿ

